ರೋಮಗಳು ನೆಟ್ಟಗಾಗುತ್ತವೆ. ಆದ್ರೆ ಆಗ ಏನೂ ಅನ್ನಿಸ್ತ ಇರ್ಲಿಲ್ಲ. ಅಪ್ಪನ ಕೆಲ್ಸ ನೋಡ್ತಾ ನೋಡ್ತಾ ನಾನು ಕಲ್ತಕಂಬಿಟ್ಟೆ. ಎಲ್ಲಾ ಹುಡುಗರು ಸಾಲೆಗೆ ಹೋದರೆ, ನಂಗೆ ಯಾರು ಸಾಲೆಗೆ ಬಾ ಅಂತ ಕರಿಲೂ ಇಲ್ಲ, ನಂಗು ಹೋಗ್ಬೇಕು ಅಂತ ತಿಳಿಲೂ ಇಲ್ಲ. ಅಷ್ಟಕ್ಕೂ ನಮ್ಮ ಹಟ್ಟಿಯಿಂದ ಯಾರೂ ಸಾಲೆಗೆ ಹೋಗಿದ್ದೆ ಕಾಣಿ. ಮೇಲಟ್ಟಿ ಹೈಕ್ಳು ಬಳಪ ಸ್ಲೇಟು ಇಡ್ಕೊಂಡು ಸಾಲೆಗೆ ಹೋಗೋವು. ನಮ್ಮಟ್ಟೀಲಿ ನಂಗೆ ಜೊತೆಗಾರ್ರೆ ಇರ್ನಿಲ್ಲ. ಎಲ್ರೂ ದೊಡ್ಡ ಹುಡುಗ್ರು, ಕೆಲ್ಸಕ್ಕೋಗೋರು. ನಾನೊಬ್ನೆ ಗೋಲಿ ಆಡ್ಕೊತಾ ತಂಗಿ ಜೊತೆ ಹಟ್ಟೀಲಿರ್ತಿದ್ದೆ. ಅಲ್ಲಿ ಇಲ್ಲಿ ಹಿಂಗೆ ತಿರ್ಗಾಡ್‌ಕೊಂಡು ಅವರಿವರು ಕೊಟ್ಟ ತಂಗಳೋ, ಮುಗ್ಗಲು ಬಂದಿದ್ದ ಕುರುಕಲೋ ತಿನ್ಕೊತಾ ಇದ್ಬಿಟ್ಟೆ.

ಒಂದು ಮಧ್ಯಾಹ್ನ ಅಪ್ಪ ಶಾನೆ ಜಾಸ್ತಿ ಕುಡಕ್ಕೊಂಡು ಮನೆಗೆ ಬಂದ, ಅವ್ವ ಮನೇಲಿ ಇರ್ನಿಲ್ಲ, ಅಪ್ಪ ಬಂದವನೆ 'ಕುಮಾರಿ ಎಲ್ಲೌಳೆ' ಕೇಳ್ದ 'ಇಲ್ಲೇ ಎಲ್ಲೋ ಆಟ ಆಡ್ತಾ ಐತೆ' ಎಂದೆ. 'ಒಸಿ ಬೇಗ ಕರಕ್ಕೊಂಡು ಬಾ' ಎಂದ. ಪಕ್ಕದ ಹಟ್ಟೀಲಿ ಕೂತ್ಕೊಂಡಿದ್ದ ಕೂಸನ್ನು 'ಅಪ್ಪ ಕರಿತಾವ್ನೆ ಬಾಮಿ' ಅಂತ ಅವಳ ಕೈ ಹಿಡಿದು ದರದರನೆ ಎಳಕ್ಕೊಂಡು ಬಂದೆ. 'ನಿಮ್ಮವ್ವಂಗೆ ಹೇಳಬೇಡ', ಎಂದೋನೆ 'ಬಾ ಕೂಸು' ಎನ್ನುತ್ತಾ ತಂಗಿಯ ಕೈ ಹಿಡಿದು ಕರಕೊಂಡು ಹೋದ. ಎಂದೂ ತಂಗಿನ ಮಾತನಾಡಿಸದವನ ವರ್ತನೆ ವಿಚಿತ್ರ ಎನಿಸಿತು. ತಂಗಿನ ಎಲ್ಲಿಗೆ ಕರಕ್ಕೊಂಡು ಹೋಗ್ತಾನೆ? ಅವ್ವನೂ ಮನೇಲಿಲ್ಲ. ಕುತೂಹಲದಿಂದ ಅಪ್ಪನ ಹಿಂದೆನೇ ಓಡಿದೆ. 'ಅಪ್ಪ ಅಪ್ಪಾ ಕೂಸನ್ನು ಎಲ್ಲಿಗೆ ಕರಕೊಂಡು ವಂಟೆ'? ನನ್ ಕೂಗು ಅಪ್ನ ಕಿವಿ ತಾಕ್ಲೆ ಇಲ್ಲ. ನಡೆಯಲು ಶಕ್ತಿಯೇ ಇಲ್ಲದಿದ್ದರೂ ತಂಗಿ ಕೈ ಹಿಡಕೊಂಡು ತೂರಾಡಿಕೊಂಡು ಹೆಜ್ಜೆ ಹಾಕ್ತಾ ಇದ್ದೊನು ನಾನು ಮತ್ತೆ ಮತ್ತೆ ಕಿರುಚಿಕ್ಕೊಂಡ ಮ್ಯಾಲೆ, ನನ್ನ ದನಿ ಕೇಳಿ 'ಎಹ್ ಬಡ್ಡತ್ತದೆ ನೀನ್ಯಾಕೆ ಬತ್ತಿಯಲೇ ಸುಮ್ಮಕೆ ಹೊಂಟೋಗು' ಗದರಿದ. ನಾನು ಸುಮ್ಮನೆ ಹಿಂದೆ ಹೆಜ್ಜೆ ಹಾಕಿದೆ, ಒಂದೆರಡು ದಪ ಹಿಮ್ಮುಖ ನೋಡಿ ಬೀದಿಲಿ ಬಿದ್ದಿದ್ದ ಕಲ್ಲೆತ್ತಿ ಎಸಿಯೋಕೆ ಬಂದ. ಕೂಸು ನನ್ನ ಕಡೆ ನೋಡ್ಕೋದು ಮುಂದೆ ಹೆಜ್ಜೆ ಹಾಕೋದು ಮಾಡ್ತಾ ಇತ್ತು. ಬೀದಿ ಕೊನೇಲಿ ಬೈಕಲ್ಲಿ ಇಬ್ಬರು ಗಂಡಸರು ನಿಂತಿದ್ರು. ಅವರ ತವಕ್ ಹೋದ ಅಪ್ಪ ಕೂಸಿನ ಕೈನ ಅವನ ಕೈಗಿಟ್ಟ, ಕೂಸು 'ಕಿಯ್ಯೋ' ಅಂತ ಚಿರಾಕ್ ಇಟ್ಕತ್ತು, ನಾನು ಓಡಿ ಹೋಗಿ ಅವರ ಕೈ ಕಿತ್ತಾಕಿ ಕೂಸು ಎತ್ಕಂಡು ಹಟ್ಟಿ ಕಡೆ ಓಡಿ ಬಂದೆ. ಆ ಗಂಡಸರು, 'ಏಹ್ ಏಹ್ ನಿಲ್ಲೊ' ಅಂತ ಕೂಗಿದ್ರು, ಹಟ್ಟಿ ಕಡೆ ಬರೊ ಧೈರ್ಯ ಮಾಣ್ಲಿಲ್ಲ. ಅವರಿಬ್ಬರು ಅಪ್ಪನ ಶರ್ಟು ಇಟ್ಟುಕೊಂಡಿದ್ದು ಕಾಣಿಸ್ತು, ಏನಾರು ಮಾಡ್ಕಳ್ಳಿ ಅಂತ ನಾನು ಅಲ್ಲಿಂದ ದುಡು ದುಡು ಓಡ್ಕಂಡು ಹಟ್ಟಿಗೆ ಬಂದು ಬಿಟ್ಟೆ. ಅವ್ವ ಮನೇಗೆ ಬಂದಿದ್ಲು ಎಲ್ಲಾನೂ ಅವ್ವನ್ ತಾವ ಹೇಳಿಬಿಟ್ಟೆ. 'ಅಯ್ಯೋ ಇಂತ ಕೆಲಸ ಮಾಡಿದ್ನ ಬೇವರ್ಸಿ, ಇವತ್ತುರ್ನಿ ಮನೆಗೆ ಅವಂಗೆ ಕಜ್ಜಾಯ ಕಾದೈತೆ, ಬಾ ಕೂಸು ಅಳಬೇಡ' ಅಂತ ಅದ್ನ ಎದೆಗವಚಿಕೊಂಡ್ಲು. ಕೂಸು 'ಅವ್ವಾ ನನ್ನ ಬಿಟ್ಟು ನೀನು ಎಲ್ಲಿಗೂ ಹೋಗಕರ್ದು, ನಂಗೆ ಭಯ ಅತತೆ ಕವ್ವ' ಅವ್ವನ ಬಿಗಿಯಾಗಿ ಅವಚಿಕೊಂತು.

ಅಂದು ರಾತ್ರಿ ಅವ್ವ ತಟ್ಟೆಗೆ ಬಿಸಿ ಮುದ್ದೆ ಕಟ್ಟಿ ಹಾಕಿದ್ಲು. ತಣೀಲಿ ಅಂತ ಮುದ್ದೆನ 'ಉಫ್ ಉಫ್' ಮಾಡ್ತಾ ಇದ್ದೆ. ಅಂದು ಬೇಗ್ನೆ ಮನೆಗೆ ಬಂದ ಕುಡುಕ ಅಪ್ಪ ರಾಕ್ಷಸಾವತಾರದಲ್ಲಿದ್ದ. ಒಳಕ್ಕೆ ಬಂದೋನೆ ನನ್ನ ತಟ್ಟೇನ ಕಾಲಲ್ಲಿ ತಳ್ಳಿದ. ಪಕ್ಕದಲ್ಲಿ ಕೂತಿದ್ದ ಕೂಸಿನ ಕೈಗೆ ಮುದ್ದೆ ಬಡಿತು. ಬಿಸಿ ತಾಗಿ ಕೂಸು ಕಿಟಾರನೆ ಕಿರಚಿಕೋತು. ಅವ್ವಂಗೆ ಎಲ್ಲಿತ್ತೋ ಕ್ವಾಪ ಕೆಳಗೆ ಬಿದ್ದ ಮುದ್ದೆ ತಕ್ಕಂಡು ಅಪ್ಪನ ಮುಖದ ಮೇಲೆ ಎಸೆದು, ಅಪ್ನ ದರದರನೆ ಎಳದು ಆಚೆಗೆ ತಳ್ಳಿದಳು. ಕೋಪದಿಂದ ಅವ್ವನ ಉಸಿರಾಟ ಜೋರಾಗಿತ್ತು, ಕಣ್ಣಲ್ಲಿ ಕೊಳ್ಳಿ ದಯ್ಯ ಕುಣ್ದಂಗೆ ಕಾಣಿಸ್ತಿತ್ತು. ಅವ್ವನ್ನ ತಳ್‌ಕೊಂಡು ಬರೊಕೆ ನೋಡ್ದ ಅಪ್ಪನ್ನ ಒಳ್ಕ್ ಬರ್ನಿಕೆ ಬಿಡ್ದೆ ಅವ್ನ ತಳ್ಳಿ ನೆಲಕ್ಕಾಣಿಸಿ 'ನೆಗ್ದು ಬಿದ್ಹೋಗ, ಹೊಟ್ಟೇಲಿ ಹುಟ್ದ ಕೂಸ್ನ ಹೆಂಡಕ್ಕೆ ಬಲಿ ಕೊಡೋಕೆ ಒಂಟಿದ್ಯಾ ಮನೆಹಾಳ, ಥೂ ನಿನ್ ಜನ್ಮಕ್ಕೆ ಬೆಂಕಿ ಹಾಕ' ಉಗ್ದು ತಡಿಕೆ ಮುಚ್ಚಿ ಒಳಕ್ಕೆ ಬಂದ್ಲು. ಹಿಂದಾಗಡೆಯೆ ಒಳ್ಕೆ ಬಂದ ಅಪ್ಪ ಇಂಗು ತಿಂದ ಮಂಗನಂಗೆ ಮೂಲೆಲಿ ಮುದುರಿಕೊಂಡು ಮಲ್ಕಂಡ.